ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಃದಃನ್ಯಾಃದಂ.,ರವರು, ಕಡೂರು
Crl. Misc. No.231/2018.

ದಿನಾಂಕ:**28.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲು:- ಆರೋಪಿ ಪರ ಶ್ರೀ ವಕೀಲರಿಂದ:-

ನಿಪಿ-1 ಎದುರುದಾರರ ತಂದೆಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಎದುರುದಾರರ ತಂದೆ ಜೀವಂತವಿದ್ದಾರೆ. ಎದುರುದಾರರ ತಾಯಿಯ ಹೆಸರು ಮಲಿಯಮ್ಮ ಎಂದರೆ ಸರಿ. ಅಗ್ರಹಾರ ಗ್ರಾಮದ ಸರ್ವೆ ನಂ.31/1 ಈಗ ಚಂದ್ರಮ್ಮ ಕೋಂ ಲೇಟ್ ನಾರಾಯಣಪ್ಪ ರವರ ಹೆಸರಿನಲ್ಲಿ ಇದೆ ಎಂದರೆ ಅದು ನನಗೆ ಗೊತ್ತಿಲ್ಲ. ನಿಪಿ 1 ಎದುರುದಾರರ ಕುಟುಂಬಕ್ಕೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ಹೇಳಿರುವಂತೆ ಮದುವೆಯ ಕಾಲದಲ್ಲಿ ಯಾವುದೇ ಚಿನ್ನ ಮತ್ತು ಹಣವನ್ನು ಎದುರುದಾರರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಮದುವೆಗೆ ರೂ.10 ಲಕ್ಷ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಎದುರುದಾರರ ಅಣ್ಣ ಬೆಂಗಳೂರಿನಲ್ಲಿ ಕೆಲಸ ಮಾಡಿಕೆಂಡು ಅಲ್ಲಿಯೇ ವಾಸವಾಗಿದ್ದಾರೆ ಎಂದರೆ ಸರಿ. ಎದುರುದಾರರ ಅಣ್ಣ ಅವಾಚ್ಯವಾಗಿ ಬೈದಿರುತ್ತಾರೆ ಎಂದು ಹೇಳಿದ್ದು, ಅವರು ಮನೆಯಲ್ಲಿ ಇಲ್ಲದೇ ಇದ್ದ ಕಾರಣ ನನಗೆ ಯಾವತ್ತು ಸಹ ಬೈದಿಲ್ಲ ಎಂದರೆ ಸರಿಯಲ್ಲ, ಅವರು ವಾರಕ್ಕೊಮ್ಮೆ ಮನೆಗೆ ಬಂದು-ಹೋಗುತ್ತಿದ್ದರು.

ಎದುರುದಾರರು ನನಗೆ ಅವಾಚ್ಯವಾಗಿ ಬೈದಿಲ್ಲ ಹಾಗೂ ಯಾವುದೇ ರೀತಿಯ ವರದಕ್ಷಿಣೆ ಕಿರುಕುಳ ನೀೀಡಿಲ್ಲ ಎಂದರೆ ಸರಿಯಲ್ಲ. ಎದುರುದಾರರು 5 ನಿವೇಶನ ಹೊಂದಿದ್ದಾರೆ ಎಂದು ಅರ್ಜಿಯಲ್ಲಿ ಹೇಳಿದ್ದು ಅದು ಸುಳ್ಳು ಎಂದರೆ ಸರಿಯಲ್ಲ. ಎದುರುದಾರರು ಯಾವುದೇ ಮಳಿಗೆ ಬಾಡಿಗೆಗೆ ನೀಡಿಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ಮಳಿಗೆ ಬಾಡಿಗೆಗೆ ನೀಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಬೀರಲಿಂಗೇಶ್ವರ ಪ್ರಾವಿಜನ್ ಸ್ಟೋರ್ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ, ಪೋಟೋ ಹಾಜರುಪಡಿಸಿರುತ್ತೇನೆ.

ಎದುರುದಾರರಿಗೆ ವಾರ್ಷಿಕ 25 ಲಕ್ಷ ಆದಾಯವಿಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ 25 ಲಕ್ಷ ಆದಾಯವಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ನಾನು ಪಹಣಿ ಹಾಜರುಪಡಿಸಿರುತ್ತೇನೆ. ಎದುರುದಾರರು ನಮ್ಮ ಮನೆಯಿಂದ ಗೊಬ್ಬರದ ಅಂಗಡಿ ಇಡಲು 2 ಲಕ್ಷ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ನನ್ನನ್ನು ಯಾವತ್ತು ಸಹಃ ಮನೆಯಲ್ಲಿ ಕೂಡಿಹಾಕಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

ನನಗೂ ಮತ್ತು ಎದುರುದಾರನಿಗೂ 23 ವರ್ಷ ವಯಸ್ಸಿನ ಅಂತರವಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮದುವೆಯ ಸಮಯದಲ್ಲಿ ಈ ವಿಚಾರವನ್ನು ನಮಗೆ ಹೇಳಿರುವುದಿಲ್ಲ. ಎದುರುದಾರನು ಎಸ್ ಎಸ್ ಎಲ್ ಸಿ ಪಾಸ್ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಅವರು ದ್ವಿತೀಯ ಪಿ ಯು ಸಿ ಓದಿರುತ್ತೇನೆ ಎಂದು ಹೇಳಿ ನನ್ನನ್ನು ಮದುವೆಯಾಗಿದ್ದರು. ನಾನೇ ಸ್ವತಃ ಎದುರುದಾರನ ಜೊತೆ ಬಾಳಲು ಸಾದ್ಯವಿಲ್ಲ ಎಂದು ಸ್ವತಃ ಮನೆ ಬಿಟ್ಟು ಬಂದಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರೇ ನನ್ನನ್ನು ಮನೆ ಬಿಟ್ಟು ಕಳುಹಿಸಿರುತ್ತಾರೆ.

ನನಗೆ ಸ್ವಂತ ಮನೆ ಇರುವುದರಿಂದ ಮಾಸಿಕ 3 ಸಾವಿರ ರೂಪಾಯಿ ಊಟ-ಬಟ್ಟೆಗೆ ಸಾಕಾಗುತ್ತದೆ ಎಂದರೆ ಸರಿಯಲ್ಲ. ನಾನು ಮಾಸಿಕ ರೂ.13,000/- ಕ್ಕಿಂತ ಹೆಚ್ಚು ಸಂಬಳ ಪಡೆಯುತ್ತಿರುವುದರಿಂದ ನಾನೇ ಜೀವನ ನಡೆಸಲು ಶಕ್ತಳಾಗಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರನು ಕೂಲಿ ಮಾಡಿಕೊಂಡು ವಾಸಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರನಿಗೆ ಈಗ 50 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದೆ ಎಂದರೆ ನನಗೆ ಗೊತ್ತಿಲ್ಲ. ಎದುರುದಾರರು ಜಮೀನಿನಲ್ಲಿ ಕೆಲಸ ಮಾಡಲು ಆಗದೆ ಬಿ ಪಿ ಎಲ್ ಕಾರ್ಡಿನ ಪಡಿತರ ಪಡೆದು ಜೀವನ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ ಬಿ ಪಿ ಎಲ್ ಕಾರ್ಡು ಇರುವುದಿಲ್ಲ. ಬಾಣಾವಾರ ವ್ಯಾಪ್ತಿಯ ಭೂ-ಪ್ರದೇಶವು ಬರಪೀಡಿತ ಪ್ರದೇಶ ಎಂದರೆ ಸರಿಯಲ್ಲ. ಅಲ್ಲಿ ಎದುರುದಾರರು ಜಮೀನು ಕೃಷಿ ಮಾಡಲಾಗದೆ ಪಾಳು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಈ ಅರ್ಜಿ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಮದುವೆಯಾಗಿ ಹಿಂಸೆನೀಡಿ ಅವರೇ ನನಗೆ ತೊಂದರೆ ನೀಡಿರುತ್ತಾರೆ.

ಈಗ ನೋಡುತ್ತಿರುವ ಆದೇಶದ ಕೋರ್ಟ್ ದೃಢೀಕೃತ ನಕಲು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ಅರಸೀಕೆರೆಯಲ್ಲಿನ ಪಾಸ್ ಆದ ಆದೇಶದ ಪ್ರತಿ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಯನ್ನು ಒಪ್ಪಿಕೊಂಡ ಮೇರೆಗೆ ಅದನ್ನು ನಿ ಆರ್ 4 ಎಂದು ಗುರುತಿಸಲಾಯಿತು. ಸದರಿ ಆದೇಶದ ಮೇಲೆ ನಾನು ಮೇಲ್ಮನವಿ ಸಲ್ಲಿಸಿರುತ್ತೇನೆ.

ಮರು ವಿಚಾರಣೆಃ- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.